**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.165-2022

ದೋ.ಸಾ. 22
ಫ್ರಾ.ಸಾ. 14
ಪ್ರ.ವ.ಬೊ.ದಿನಾಂಕ. 21-01-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ದಾದಾಪೀರ್ |
| ತಂದೆ / ಗಂಡನ ಹೆಸರು | - | ಅಬ್ದುಲ್ ಅಜೀಜ್ |
| ವಯಸ್ಸು | - | 52 |
| ಉದ್ಯೋಗ | - | ಎಎಸ್ಐ, ಕೆಟಿಜೆ ನಗರ ಪೊಲೀಸ್ ಠಾಣೆ, ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು 2020 ರಿಂದ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿಃ 16-10-2020 ರಂದು ನಾನು ಠಾಣಾ ಪ್ರಭಾರದಲ್ಲಿ ಇರುವಾಗ ಸಂಜೆ 4-30 ಗಂಟೆಗೆ ದಾವಣಗೆರೆಯ ಎಸ್ ಎಸ್ ಐಟೆಕ್ ಆಸ್ಪತ್ರೆಯಲ್ಲಿ ಫ್ರಾ.ಸಾ.1 ರವರು ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಕುರಿತು ಮಾಹಿತಿ ಬಂದಿದ್ದು, ನಾನು ಠಾಣಾ ಪಿಎಸ್ಐ ರವರ ಆದೇಶದ ಮೇರೆಗೆ ಸದರಿ ಆಸ್ಪತ್ರೆಗೆ ನಾನು ಮತ್ತು ಚಾ.ಸಾ.20 ರವರು ತೆರಳಿ ಎಂಎಲ್ ಸಿ ವರದಿಯನ್ನು ಸ್ವೀಕರಿಸಿ ತದನಂತರ ದಾಖಲಾಗಿದ್ದ ಫ್ರಾ.ಸಾ.1 ರವರ ಹೇಳಿಕೆಯನ್ನು ನಿ.ಪಿ.1 ರಂತೆ ಪಡೆದಕೊಂಡಿದ್ದು, ಅದನ್ನು ಚಾ.ಸಾ.20 ರವರು ಬರೆದಿದ್ದು, ಅದಕ್ಕೆ ನಾನು ಕೂಡ ಸಹಿ ಮಾಡಿದ್ದು, ನಂತರ ಠಾಣೆಗೆ ಆಗಮಿಸಿ ಸದರಿ ನಿ.ಪಿ.1 ನ್ನು ಚಾ.ಸಾ.23 ರವರಿಗೆ ಹಸ್ತಾಂತರಿಸಿರುತ್ತೇನೆ. ನಿ.ಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಅಲ್ಲದೇ ಎಸ್ ಎಸ್ ಆಸ್ಪತ್ರೆಯ ಎಂಎಲ್ ಸಿ ವರದಿಯನ್ನು ನಿ.ಪಿ.30 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.30(ಎ) ಎಂದು ಗುರುತಿಸಲಾಯಿತು.

ನಂತರ ದಿಃ 27-10-2020 ರಂದು ಚಾ.ಸಾ.23 ರವರು ಅನ್ಯ ಕರ್ತವ್ಯದ ಮೇರೆಗೆ ಹೋಗಿದ್ದು, ಕಡತವನ್ನು ನನಗೆ ನೀಡಿದ್ದು, ಸದರಿ ದಿನ ಫ್ರಾ.ಸಾ.1 ರವರು ಠಾಣೆಗೆ ಆಗಮಿಸಿ ಘಟನೆಯ ಸಮಯದಲ್ಲಿ ತಾನು ಧರಿಸಿದ್ದೆ ಎಂದು ಹೇಳಲಾದ ಮು.ಮಾ.1 ಮತ್ತು 3 ಬಟ್ಟೆಗಳನ್ನು ಹಾಜರುಪಡಿಸಿದ್ದು, ಅದನ್ನು ನಾನು ಪಂಚರ ಸಮಕ್ಷಮ ನಿ.ಪಿ.2 ರಂತೆ ಪಂಚನಾಮೆಯನ್ನು ಬರೆದು, ನಿ.ಪಿ.3 ರಂತೆ ಫೋಟೋವನ್ನು ತೆಗೆದು ವಶಕ್ಕೆ ಪಡೆದಿರುತ್ತೇನೆ. ಅಲ್ಲದೇ ಮು.ಮಾ.1 ಮತ್ತು 3 ನ್ನು ಮು.ಮಾ.2 ಮತ್ತು 4 ರಲ್ಲಿ ಇಟ್ಟು ಅರಗು ಸೀಲು ಹಾಕಿ ನನ್ನ ಮತ್ತು ಪಂಚ ಸಾಕ್ಷಿದಾರರ ಸಹಿಯುಳ್ಳ ಚೀಟಿಗನಳನ್ನು ಅಂಟಿಸಿರುತ್ತೇನೆ. ಮು.ಮಾ.2 ಮತ್ತು 4 ರಲ್ಲಿರುವ ಸಾಕ್ಷಿಯ ಸಹಿಗಳನ್ನು ಮು.ಮಾ.2(ಸಿ) ಮತ್ತು 4(ಸಿ) ಎಂದು ಗುರುತಿಸಲಾಯಿತು. ಆ ಪೂರ್ವದಲ್ಲಿ ಪಂಚರಿಗೆ ನಿ.ಪಿ.13 ಹಾಗೂ ಇನ್ನೊಂದು ನೋಟೀಸನ್ನು ಜಾರಿ ಮಾಡಿರುತ್ತೇನೆ. ಇನ್ನೊಂದು ನೋಟೀಸನ್ನು ನಿ.ಪಿ.31 ಎಂದು ಹಾಗೂ ನಿ.ಪಿ.13 ಮತ್ತು 31 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.13(ಬಿ) ಮತ್ತು 31(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ಮು.ಮಾ.1

ಮತ್ತು 3 ನ್ನು ಗುರುತಿಸಿರುವುದಲ್ಲದೇ, ಅವುಗಳಿಗೆ ರಕ್ತ ತಾಗಿದೆ ಎಂದು ನುಡಿದಿರುತ್ತಾರೆ. ಅಲ್ಲದೇ ಮು.ಮಾ.1 ಮತ್ತು 3 ನ್ನು ಠಾಣಾ ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಕಡತವನ್ನು ಚಾ.ಸಾ.23 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಫ್ರಾ.ಸಾ.1 ರವರನ್ನು ನಾನು ಎಸ್ ಎಸ್ ಆಸ್ಪತ್ರೆಯಲ್ಲಿ ನೋಡಿದಾಗ ಅವರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ನಿ.ಪಿ.1 ರಲ್ಲಿ ಸದರಿ ಹೇಳಿಕೆ ಪಡೆಯುವ ಸಮಯದಲ್ಲಿ ಫ್ರಾ.ಸಾ.1 ರವರು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇದ್ದರು ಎನ್ನುವ ಕುರಿತು ವೈದ್ಯಾಧಿಕಾರಿಯವರು ಅದರಲ್ಲಿ ಶರಾ ಬರೆದಿದ್ದು ಇರುವುದಿಲ್ಲ ಎಂದರೆ ಸರಿ.

ಫ್ರಾ.ಸಾ.1 ರವರು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ "ನಾನು ಚಾ.ಸಾ.14 ರವರನ್ನು ಪ್ರೀತಿಸುತ್ತಿದ್ದ ಕಾರಣ ಈ ಘಟನೆ ಆಗುವ ಮೂರು ತಿಂಗಳ ಮೊದಲಿನಿಂದ 1 ನೇ ಆರೋಪಿಯು ನನ್ನನ್ನು ಬೆದರಿಸುತ್ತಿದ್ದ ಹಾಗೂ ಧಮಕಿ ಹಾಕುತ್ತಿದ್ದ. ಆ ಸಮಯದಲ್ಲಿ ಆತ ನನ್ನ ಬಳಿ ಚಾ.ಸಾ.14 ರವರನ್ನು ಪ್ರೀತಿಸಬೇಡ ಎಂದು ಹೇಳುತ್ತಿದ್ದ. ಆಗ ನಾನು ಆತನ ಬಳಿ ನಾನು ಚಾ.ಸಾ.14 ರವರನ್ನು ಪ್ರೀತಿಸುತ್ತಿದ್ದೇನೆ ಬಿಡುವುದಿಲ್ಲ ಎಂದು ಹೇಳಿರುತ್ತೇನೆ." ಎನ್ನುವ ವಿಚಾರ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ಅದೇ ರೀತಿ ಫ್ರಾ.ಸಾ.1 ರವರು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ " ಆ ಸಮಯದಲ್ಲಿ ನನ್ನ ಎದುರುಗಡೆ 1 ನೇ ಆರೋಪಿಯು ನಿಂತುಕೊಂಡಿದ್ದು, ಹಿಂದುಗಡೆ 2 ನೇ ಆರೋಪಿಯು ನಿಂತಿದ್ದ. ಆ ಸಮಯದಲ್ಲಿ ಹಿಂದುಗಡೆಯಿದ್ದ 2 ನೇ ಆರೋಪಿಯು ನನ್ನ ಹಿಂಬದಿಯ ಬೆನ್ನಿಗೆ ಚಾಕುವಿನಿಂದ ಚುಚ್ಚಿರುತ್ತಾನೆ. ಆ ಸಮಯದಲ್ಲಿ ನಾನು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಾಗ 1 ನೇ ಆರೋಪಿಯು 2 ನೇ ಆರೋಪಿಯ ಕಡೆಯಿಂದ ಚಾಕುವನ್ನು ತೆಗೆದುಕೊಂಡು ನನ್ನ ಕುತ್ತಿಗೆಯ ಬಳಿ ಚುಚ್ಚಲು ಬಂದಿದ್ದು, ಆಗ ನಾನು ನನ್ನ ಎಡಗೈಯಿಂದ ತಡೆದಿದ್ದು, ಚಾಕು ನನ್ನ ಎಡಗೈಗೆ ತಾಗಿರುತ್ತದೆ." ಎನ್ನುವ ವಿಚಾರವನ್ನು ಕೂಡ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ಅದೇ ರೀತಿ ಫ್ರಾ.ಸಾ.1 ರವರು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ " ಈ ರೀತಿ ಆರೋಪಿತರು ನನ್ನ ಕತ್ತಿಗೆ ಇರಿದು ಸಾಯಿಸಲು ಪ್ರಯತ್ನಿಸಿರುತ್ತಾರೆ. ಆ ರೀತಿ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಕಾರಣ ನಾನು ಅಲ್ಲಿ ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ. ಆ ಸಮಯದಲ್ಲಿ ಸದರಿ ಸ್ಥಳಕ್ಕೆ ಓರ್ವ ವ್ಯಕ್ತಿಯು ಬಂದಿದ್ದು, ಅಲ್ಲದೇ ಒಂದು ಪೋಲೀಸ್ ಜೀಪ್ ಕೂಡ ಬಂದಿದ್ದು, ನಂತರ ಅವರು ನನ್ನನ್ನು ಚಿಗಟೇರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. " ಎನ್ನುವ ವಿಚಾರವನ್ನು ಕೂಡ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಈ ರೀತಿಯಾಗಿ ಹೇಳಿರುವುದಿಲ್ಲ, ಆದರೆ ಪೋಲೀಸರು ಬಂದಿರುವುದನ್ನು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಆದರೆ ಸದರಿ ಪೋಲೀಸರ ಹೆಸರನ್ನು ನಿ.ಪಿ.1 ರಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು 1 ನೇ ಆರೋಪಿಯು ಫ್ರಾ.ಸಾ.1 ರವರ ವಿರುದ್ಧ ನಮ್ಮ ಠಾಣೆಯಲ್ಲಿ ನೀಡಿದ ದೂರಿನ ಕುರಿತು ಕ್ರಮ ಕೈಗೊಂಡಿರುವ ದಾಖಲೆ ಎಂದು ಕೇಳಲಾಗಿದ್ದು,

ಸಾಕ್ಷಿಯು ಅದನ್ನು ನೋಡಿ ಹೌದು ಎಂದು ನುಡಿದಿರುವ ಕಾರಣ ಸದರಿ ದಾಖಲೆಯನ್ನು ನಿ.ಡಿ.4 ಎಂದು ಗುರುತಿಸಲಾಯಿತು.

ಡಿವೈ ಎಸ್ ಪಿ ಬಾಬು ಎನ್ನುವವರು 2018 ರಿಂದ 2021 ರವರೆಗೆ ದಾವಣಗೆರೆಯ ನಗರ ಉಪವಿಭಾಗದಲ್ಲಿ ಕರ್ತವ್ಯ ಮಾಡಿರುತ್ತಾರೆ ಎಂದರೆ ಸರಿ. ಫ್ರಾ.ಸಾ.1 ರವರು ಸದರಿ ಬಾಬು ಡಿವೈ ಎಸ್ ಪಿ ಅವರಿಗೆ ಸಂಬಂಧಿಕರು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಫ್ರಾ.ಸಾ.1 ರವರೇ 1 ನೇ ಆರೋಪಿಗೆ ಚಾಕುವಿನಿಂದ ಇರಿದಿದ್ದು, ಆದರೆ ಸದರಿ ಡಿವೈ ಎಸ್ ಪಿ ಅವರ ಪ್ರಭಾವಕ್ಕೆ ಒಳಗಾಗಿ ಆರೋಪಿತರ ವಿರುದ್ಧ ನಾವು ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮ್ಮ ಠಾಣೆಗೆ ದೂರು ನೀಡಲು ಬಂದಾಗ ಆತನನ್ನು ನಾವು ವಶಕ್ಕೆ ಪಡೆದು ಆತನ ವಿರುದ್ಧ ಕ್ರಮ ಕೈಗೊಂಡಿರುತ್ತೇವೆ ಎಂದರೆ ಸರಿಯಲ್ಲ. ಫ್ರಾ.ಸಾ.1 ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆ ದೂರು ನೀಡದೇ ಇದ್ದರೂ ಕೂಡ ನಾವೇ ಸದರಿ ದಾಖಲೆಯನ್ನು ಸೃಷ್ಟಿಸಿ ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಿಃ 27-10-2020 ರಂದು ಫ್ರಾ.ಸಾ.1 ರವರು ತಂದು ಹಾಜರುಪಡಿಸಿದ ಮು.ಮಾ.1 ಮತ್ತು 3 ಬಟ್ಟೆಗಳನ್ನು ಅಮಾನತು ಮಾಡಿಕೊಂಡಿದ್ದು, ಸದರಿ ಬಟ್ಟೆಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.21 16:29:14 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.